# ಗಿರೀಶ ಕಾರ್ನಾಡರ ಜೀವನ ಮತ್ತು ನಾಟಕಗಳ ವೈಶಿಷ್ಟ್ಯಗಳು

**ಜಯಶ್ರೀ ಯ. ಮುಗಳಿ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ದ.ಮ.ಶಿ. ಮಂಡಳದ ಭಾವುರಾವ ಕಾಕತಕರ ಮಹಾವಿದ್ಯಾಲಯ, ಬೆಳಗಾವಿ.

DOI: https://doi.org/10.5281/zenodo.17221609

## ABSTRACT:

ಕನ್ನಡಕ್ಕೆ ಏಳನೇ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕನ್ನಡ ಸಾಹಿತ್ಯ ಮತ್ತು ನಾಟಕ ಕ್ಷೇತ್ರದ ಮೇರು ದಿಗ್ಗಜ ಗಿರೀಶ ಕಾರ್ನಾಡ. ಇವರು ಮಹಾರಾಷ್ಟ್ರದ ಮಾಥೇರಾನದಲ್ಲಿ ಜನಿಸಿದರು. ತಮ್ಮ ಶಿಕ್ಷಣವನ್ನು ಮಾಥೇರಾನ, ಧಾರವಾಡ ಮತ್ತು ಮುಂಬೈಯಲ್ಲಿ ಶಿಕ್ಷಣ ಪೂರ್ಣಗೊಳಿಸಿದರು. ಇವರು ಸಮಕಾಲೀನ ಬದುಕಿನ ಸಂಕೀರ್ಣತೆಯನ್ನು ಪರಂಪರೆಯ ಮೌಲ್ಯಗಳೊಂದಿಗೆ ಇಟ್ಟು ಅನುಭವ ಮತ್ತು ಅರ್ಥಸ್ತರಗಳನ್ನು ನಾಟಕ ಮೂಲಕವೇ ವಿಸ್ತರಿಸಿದರು.

ಕನ್ನಡ ನಾಟಕ ಕ್ಷೇತ್ರದಲ್ಲಿ ಕಾರ್ನಾಡರ ಆಗಮನದ ಸಂದರ್ಭ ಗಮನಾರ್ಹವಾದ ಅಂಶ. ಅದು ವಾಸ್ತವ ಮಾರ್ಗದ ನಾಟಕಗಳ ಕೊರತೆಯ ಕಾಲ. ಶ್ರೀರಂಗರಂತಹ ಪ್ರಮುಖ ನಾಟಕಕಾರರೇ ಹೊಸ ನಾಟಕಗಳ ರಚನೆಗೆ ತೊಡಗಿದ ಸಮಯ. ಪಾಶ್ಚಿಮಾತ್ಯ ನಾಟಕಕಾರರ ಕೃತಿಗಳು ಹೊಸ ಸಾಧನೆಯ ದಿಗಂತವನ್ನು ಅವರಿಗೆ ಸೂಚಿಸಿದವು. ಹೊಸ ದೃಷ್ಟಿಕೋನ, ತುಡಿತ ಅವರಲ್ಲಿ ಮೂಡಿತು. ಭಾರತದ ಹಲವಾರು ಭಾಷೆಗಳ ರಂಗಭೂಮಿಯ ಮೇಲೆ ಯಶಸ್ವಿ ಪ್ರಯೋಗ ಕಂಡ ಅವರ ನಾಟಕಗಳು ಪ್ರೇಕ್ಷಕರನ್ನು ಮರುಳುಗೊಳಿಸಿತ್ತು.

## KEYWORDS:

ಕಾರ್ನಾಡ, ನಾಟಕ, ರಂಗಭೂಮಿ, ಸಾಹಿತ್ಯ, ಸಿನಿಮಾ.

**ಕಾರ್ನಾಡರ ಜೀವನ ಮತ್ತು ಸಾಹಿತ್ಯ:**

ಗಿರೀಶ ಕಾರ್ನಾಡರವರು ಮೂಲತಃ ಮಹಾರಾಷ್ಟ್ರದ ಮಾಥೇರಾನದಲ್ಲಿ 19–05–1938ರಂದು ಜನಿಸಿದರು. ತಂದೆ ರಘುನಾಥರಾಯರು, ತಾಯಿ ಕೃಷ್ಣಾಬಾಯಿ. ಕಾರ್ನಾಡರು ಮಾಥೇರಾನ, ಶಿರಸಿ, ಧಾರವಾಡ, ಮುಂಬೈಯಲ್ಲಿ ಶಿಕ್ಷಣವನ್ನು ಪೂರ್ಣಗೊಳಿಸಿದರು. 1970ರಲ್ಲಿ ಮೈಸೂರು ರಾಜ್ಯ ಪ್ರಶಸ್ತಿ, 1974ರಲ್ಲಿ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, 1992ರಲ್ಲಿ ಪದ್ಮಭೂಷಣ ಪ್ರಶಸ್ತಿ, 1998 ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡರು.

**ಕಾರ್ನಾಡರ ವಿಶೇಷ ರಂಗಸೇವೆ:**

ಕಾರ್ನಾಡರು ನಾಟಕಕಾರ, ನಿರ್ದೇಶಕ, ನಟ, ಕ್ರಾಂತಿಕಾರಿ, ಬರಹಗಾರ, ಸಿನಿಮಾ ನಟ, ಹೀಗೆ ಬಹುಮುಖ ಪ್ರತಿಭೆಯ ಕಾರ್ನಾಡರ ಸಮಗ್ರ ಸಾಹಿತ್ಯಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ ಸಂದಿದೆ. ದೇಶವಿದೇಶಗಳನ್ನು ಸಂಚರಿಸಿ ಅಪಾರ ಅನುಭವ ಪಡೆದು ಖ್ಯಾತಿ ಗಳಿಸಿದರು. ಮುಂದೆ ಕಾರ್ನಾಡರ ಕಾರ್ಯಕ್ಷೇತ್ರ ರಂಗಭೂಮಿಯಾಯಿತು. ಆರಂಭದಲ್ಲಿ ಕವಿಯಾಗಿ ಕನ್ನಡ, ಇಂಗ್ಲೀಷಿನಲ್ಲಿ ಕೆಲ ಕವನಗಳನ್ನೂ ಬರೆದಿದ್ದರು. ಆದರೆ ತಮ್ಮ ಮೊದಲನೆಯ ನಾಟಕ 'ಯಯಾತಿ' ಬರೆದ ಮೇಲೆ ಕೊನೆಯವರೆಗೂ ನಾಟಕಗಳನ್ನೇ ಬರೆದರು.

ತುಘಲಕ್1964, ಹಯವದನ–1971, ಅಂಜುಮಲ್ಲಿಗೆ1977, ಹಿಟ್ಟಿನ ಹುಂಜ 1980, ನಾಗಮಂಡಲ1988, ತಲೆದಂಡ1990, ಅಗ್ನಿ ಮತ್ತು ಮಳೆ1995, ಟಿಪ್ಪುವಿನ ಕನಸುಗಳು1999 ಇವು ಅವರ ನಾಟಕಗಳು.

**ಕಾರ್ನಾಡರ ನಾಟಕಗಳ ವೈಶಿಷ್ಟ್ಯ :**

ಕನ್ನಡ ನಾಟಕ ಕ್ಷೇತ್ರದಲ್ಲಿ ಕಾರ್ನಾಡರ ಆಗಮನದ ಸಂದರ್ಭ ಗಮನಾರ್ಹವಾದ ಅಂಶ. ಅದು ವಾಸ್ತವ ಮಾರ್ಗದ ನಾಟಕಗಳ ಕೊರತೆಯ ಕಾಲ. ಶ್ರೀರಂಗರಂತಹ ಪ್ರಮುಖ ನಾಟಕಕಾರರೇ ಹೊಸ ನಾಟಕಗಳ ರಚನೆಗೆ ತೊಡಗಿದ ಸಮಯ. ಆದರೆ ಕಾರ್ನಾಡರಿಗೆ ಅತ್ತ ಬರ್ನಾರ್ಡ್ ಶಾ ಮತ್ತು ಇತ್ತ ಶ್ರೀರಂಗರ ನಾಟಕಗಳು ಪ್ರಭಾವ ಬೀರಿದ್ದರೂ ಅವುಗಳ ಮಾರ್ಗದಲ್ಲಿ ಸಾಗಿ ಬರುವುದು ಅವರ ಪ್ರತಿಭೆಗೆ ರುಚಿಸಲಿಲ್ಲ. ಹೊಸ ಮಾರ್ಗ ಪ್ರವರ್ತಕರಾಗುವುದು ಬೇಕಿತ್ತು. ಪಾಶ್ಚಿಮಾತ್ಯ ನಾಟಕಕಾರರಾದ ಸಾತ್ರ್ರ್, ಕಮೂ ಅವರ ಕೃತಿಗಳು ಹೊಸ ಸಾಧನೆಯ ದಿಗಂತವನ್ನು ಅವರಿಗೆ ಸೂಚಿಸಿದ್ದವು. ಹೊಸ ದೃಷ್ಟಿಕೋನದ ತುಡಿತ, ಅಭಿವ್ಯಕ್ತಿಗೆ ರಭಸದಿಂದ ಅವಕಾಶ ನಿರ್ಮಿಸಿಕೊಟ್ಟ ಕಾಲವದು.

ಇದುವರೆಗೆ ಎಂಟು ನಾಟಕಗಳನ್ನು ರಚಿಸುವುದರ ಜೊತೆಗೆ ನಟ,

ನಿರ್ದೇಶಕರಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಆಧುನಿಕ ಕನ್ನಡ ನಾಟಕ ರಂಗಭೂಮಿಯಲ್ಲಿ ಅಗ್ರಗಣ್ಯ ಹೆಸರು ಪಡೆದ ಇವರು ಅತ್ಯಂತ ಪ್ರತಿಭಾಶೀಲ, ಸಂವೇದನಾಶೀಲ ಮತ್ತು ಸೃಜನಶೀಲ ಬಹುಮುಖ ವ್ಯಕ್ತಿತ್ವ ಹೊಂದಿದ್ದು ಅಂತರಾಷ್ಟ್ರೀಯ ಸ್ತರಗಳಲ್ಲಿ ಹೆಸರು ಮಾಡಿದ ಕೆಲವೇ ಬೆರಳೆಣಿಕೆಯ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು.

ಇತಿಹಾಸ, ಪುರಾಣ, ಜಾನಪದ ಕ್ಷೇತ್ರಗಳ ವಸ್ತು, ವಿಷಯಗಳನ್ನು ಬಳಸಿಕೊಂಡು ಸಮಕಾಲೀನ ಈ ಕಾಳಜಿ ಆತಂಕಗಳನ್ನು ಮತ್ತು ಮೂಲಭೂತ ಸಮಸ್ಯೆ, ಸಂಬಂಧಗಳನ್ನು ಸ್ವಂತಿಕೆಯ ಸ್ವರದಲ್ಲಿ ಶೋಭಿಸುವುದು ಕಾರ್ನಾಡರ ನಾಟಕ ರಚನೆಯ ಪ್ರಕ್ರಿಯೆ ಆಗಿತ್ತು. ಇವರ ನಾಟಕಗಳು ಸದಾ ಹೊಸ ದಾರಿ ಹೊಸ ಪ್ರಯೋಗಗಳ ಶೋಧನೆಯಲ್ಲಿ ನಡೆಯುತ್ತಿರುವುದು ಕಾಣುತ್ತೇವೆ.

ಪರಂಪರೆ ಎಲ್ಲಾ ಪ್ರೌಢ, ನುರಿತ, ಫಲಪ್ರದವಾದ ವಸ್ತು ತಂತ್ರಗಳ ಹೊಸ ಪ್ರಯೋಗಾತ್ಮಕ ಒಡನಾಟ ಮಿಶ್ರಣ ಮತ್ತು ಸಮೀಕರಣಕ್ಕೆ ಚಾಲನೆ ನೀಡಿದ್ದರು. ಜೀವನ ಕ್ರಮದಲ್ಲಿ, ಮನುಷ್ಯ ಸಂಬಂಧಗಳಲ್ಲಿ ಮಾನವನ ಮೂಲಭೂತ ಸ್ವಭಾವಗಳ ಹಿನ್ನೆಲೆಯಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಮಾನವನ ಮೂಲ ನಿಯಮ ಏನು? ಎಂಬುದರ ಬಗೆಗೆ ವೈಯಕ್ತಿಕ ಜ್ಞಾನ, ಅಧ್ಯಯನ, ಅನುಭವಗಳ ಒಂದು ಹೊಸ ಸತ್ಯಶೋಧನೆಯ ಪ್ರಯೋಗ ತಪ್ಪದೇ ಅವರ ನಾಟಕಗಳಲ್ಲಿ ಬಂದಿದ್ದು ಒಂದು ಹೊಸ ಕ್ರಮವನ್ನು, ವೈಚಾರಿಕ ವಿಶ್ಲೇಷಣೆಯನ್ನು ಪ್ರಸ್ತುತಪಡಿಸುತ್ತವೆ.

ಕಾರ್ನಾಡರ ಮೊದಲ ನಾಟಕ "ಯಯಾತಿ" ಪುರಾಣಿಕ ವಸ್ತು ಚೌಕಟ್ಟಿನಲ್ಲಿದೆ. ಕಥೆ ಮೊದಲೇ ಪರಿಚಿತವಿದ್ದರೂ ಹೊಸತನ ಇರುವುದು ನಾಟಕದಲ್ಲಿಯ ಪಾತ್ರಗಳ ಅಂತರಂಗದ ಹೊಸ ದೃಷ್ಟಿಯ ವಿಶ್ಲೇಷಣೆಯಲ್ಲಿ. ಇಲ್ಲಿ ಜೀವನ ಮತ್ತು ಪ್ರೇಮದ ಬಗ್ಗೆ ದ್ವಂದ್ವವಿದ್ದು ನಾಟಕಕಾರನ ವಿಶಿಷ್ಟತೆಯನ್ನು ಅನಾವರಣಗೊಳಿಸುತ್ತದೆ. ಮೂಲ ಕಥೆಯಲ್ಲಿ ಬರುವ ಸನ್ನಿವೇಶ ಮತ್ತು ಸಂದರ್ಭ, ಪಾತ್ರಗಳಲ್ಲಿ ಇವರು ಮಾಡಿಕೊಂಡ ಬದಲಾವಣೆಗಳು ನಾಟಕಕ್ಕೆ ಆರಿಸಿಕೊಂಡ ತಂತ್ರ ಮತ್ತು ವಿಧಾನಕ್ಕೆ ಅನುಗುಣವಾಗಿದೆ. ನಾಟಕಕಾರನ ಉದ್ದೇಶ ಹೊಸ ದೃಷ್ಟಿ, ಹೊಸ ದರ್ಶನಗಳು ಬಂದು ಒಟ್ಟು ಸಂಕೀರ್ಣ ಮೌಲ್ಯವಾಗಿರುವುದು ಕಂಡುಬರುತ್ತದೆ. ಯಯಾತಿ ನಾಯಕನಾಗಿದ್ದರೂ ಕೊನೆಗೆ ದುರಂತ ನಾಯಕನಾಗಿ ಗೋಚರಿಸುತ್ತಾನೆ. ಅದೇ ರೀತಿ 'ಹೆಣ್ಣಿಗೆ ಹೆಣ್ಣೇ ಶತ್ರು' ಎಂಬ ಗಾದೆ ಮಾತನ್ನು ನಾಟಕದಲ್ಲಿ ಶರ್ಮಿಷ್ಠೆ ಮೇಲೆ ಆಗುವ ಅನ್ಯಾಯದ ಮೂಲಕ ತಿಳಿಯಬಹುದಾಗಿದೆ.

ಹದಿನಾಲ್ಕನೇ ಶತಮಾನದ ಭಾರತ ಇತಿಹಾಸದ ವಸ್ತುವಾಗುಳ್ಳ 'ತುಘಲಕ'

ನಾಟಕ ಕಾರ್ನಾಡರನ್ನು ಯಶಸ್ವಿ ನಾಟಕಕಾರರನ್ನಾಗಿಸಿತು. ಅಂದಿನ ಐತಿಹಾಸಿಕ ವಾತಾವರಣವನ್ನು ಸ್ಪಷ್ಟವಾಗಿ ಕಲ್ಪಿಸಿಕೊಂಡು ಸಮಕಾಲೀನ ಬದುಕಿನ ಗುಣ ವಿಶೇಷಗಳನ್ನು ಈ ನಾಟಕದಲ್ಲಿ ಸಮೀಕರಿಸಿದರು. ಮಹಮ್ಮದ್‌ನೇ ಕೇಂದ್ರ ಪಾತ್ರದಲ್ಲಿದ್ದು ಅವನ ವ್ಯಕ್ತಿತ್ವ, ಮೌಲ್ಯಗಳು, ಕ್ರಿಯೆ ಹೀಗೆ ವಿರೋಧಾತ್ಮಕವಾಗಿ ಅಸಂಬದ್ಧತೆಯನ್ನು ಬಿಂಬಿಸುತ್ತವೆ ಎಂಬುದನ್ನು ಹಾಗೂ ಮನುಷ್ಯ ಮತ್ತು ಅಧಿಕಾರ ಅವುಗಳ ಸತ್ಯ ವಿಶ್ಲೇಷಣೆಗೆ ಗುರಿಯಾಗುತ್ತವೆ ಎಂದು ಕಾರ್ನಾಡರು ಬಹು ಪ್ರೌಢತೆಯಿಂದ ಮತ್ತು ಪ್ರಭಾವಶಾಲಿಯಾಗಿ ಚಿತ್ರಿಸಿದರು.

ಸಮರ್ಥ ಎದುರಾಳಿಗಳೇ ಇಲ್ಲದ ತುಘಲಕ್‌ನಿಗೆ ಚರಿತ್ರೆಯೇ ಎದುರಾಳಿ. ಇದು ಕೇವಲ ತಾತ್ವಿಕ ನೆಲೆಯಲ್ಲಿದಿದ್ದರೆ ಗಮನಾರ್ಹವಾಗುತ್ತಿರಲಿಲ್ಲ. ನಾಟಕಗಳ ಅಂಗಾಂಗಗಳಾದ ಪಾತ್ರ ಮತ್ತು ಸನ್ನಿವೇಶಗಳ ಮುಖಾಂತರ ಸಕಾರವಾಗಿ ಅನನ್ಯತೆಯನ್ನು ಚಿತ್ರಿಸುವುದರಿಂದ ಯಶಸ್ವಿ ನಾಟಕದ ಪಟ್ಟಿಗೆ ಅರ್ಹವಾಗಿದೆ. ಕಾರ್ನಾಡರ ನಾಟಕದ ಒಟ್ಟು ಒಳರಚನೆಯ ಕಾಲ್ಪನಿಕ ಅತ್ಯಂತ ಚೌಕಟ್ಟನ್ನು ಪ್ರತಿಭೆಯಿಂದ ಸಾಕ್ಷಾತ್ಕಾರಗೊಳಿಸುವಲ್ಲಿ ಯಶಸ್ವಿಯಾದುದೆ ಅವರ ಹೆಗ್ಗಳಿಕೆ. ‘‘ಧರ್ಮವನ್ನು ಪೀಠದ ಮೇಲಿಟ್ಟು ಚರ್ಚಿಸದೆ ವ್ಯಕ್ತಿಗಳ ಅನುಭವ ಮಟ್ಟದ್ದಲ್ಲಿ ಚರ್ಚಿಸುತ್ತದೆ’’ ಎಂದು ಅಭಿಪ್ರಾಯಪಡಲಾಗಿದೆ. ಈ ಕಾರಣದಿಂದ ಅನೇಕ ವಿಮರ್ಶಕರು ಈ ನಾಟಕ ಶ್ರೇಷ್ಠ ನಾಟಕವೆಂದು ಪರಿಗಣಿಸುವುದು ಉಂಟು, ಇದು ಕಾರ್ನಾಡರಿಗೆ ನಾಟಕ ಪ್ರಕಾರದಲ್ಲಿಯೇ ತಮ್ಮ ಸೃಜನಶಕ್ತಿಯನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಪ್ರೇರಣಾದಾಯಕ ಶಕ್ತಿಯಾಯಿತು.

ಹಯವದನ ಕಾರ್ನಾಡರ ಮುಂದಿನ ವಿಶೇಷ ನಾಟಕ. ‘‘ಬೇತಾಳ ಪಂಚವಿಂಶತಿ’’ಯ ಕಪಿಲದೇವದತ್ತರ ಕಥೆ ಚೌಕಟ್ಟನ್ನು ಬಳಸಿಕೊಂಡರೂ ಇಲ್ಲಿ ಬರುವ ಹಯವದನದ ಅಂತರಂಗ ಮತ್ತು ಕಪಿಲದೇವದತ್ತರ ಕಥೆಗಳಲ್ಲಿಯ ಸಾಮಾನ್ಯ ಗುಣಗಳು ಆಕರ್ಷಕವಾಗಿ ಕುತೂಹಲಕಾರಿಯಾಗಿವೆ. ಒಂದು ಹೆಣ್ಣು ಎರಡು ಗಂಡಿನ ಸಮಸ್ಯೆಯಾಗಿ ನಾಟಕಕಾರರ ಅದಲುಬದಲಿನ ತಂತ್ರ ಒಂದು ಹೊಸ ಕಲ್ಪನೆಗೆ ದಾರಿ ಮಾಡಿಕೊಡುತ್ತದೆ. ಎರಡು ಕತೆಗಳೂ ಸೇರಿಗೊಂಡಾಗಲೇ ‘‘ಹಯವದನ’’ ಪೂರ್ಣ ಪ್ರಮಾಣದ ಪ್ರಭಾವಿ ನಾಟಕವಾಗುತ್ತದೆ. ಭಾಗವತ ಮತ್ತು ಮೇಳಗಳ ತಂತ್ರ ವಿಧಾನ, ವಾಸ್ತವದ ಸ್ಪರ್ಶ, ವರ್ತಮಾನದ ವಿವರಗಳು ಈ ನಾಟಕವನ್ನು ಯಶಸ್ವಿಗೊಳಿಸಿದವು. ‘‘ಅಮೂರ್ತವಾದದ್ದನ್ನು ಮೂರ್ತವಾಗಿಸಬಲ್ಲ ನಾಟಕಕಾರನ ಕೌಶಲ್ಯತೆಗೆ ಸಾಕ್ಷಿ’’ ಎಂದು ಹೆಸರಾಂತ ವಿಮರ್ಶಕರೊಬ್ಬರೂ ಅಭಿಪ್ರಾಯ ಪಡುತ್ತಾರೆ. ಇದು ರಂಗಭೂಮಿಯ ದೃಷ್ಟಿಯಿಂದ ಮುಕ್ತ ರಂಗಭೂಮಿ ಮತ್ತು ಜನಪದ ರಂಗಭೂಮಿಗಳ ಒಂದು ಸುಂದರ ಸಾಮರಸ್ಯ, ಸಮನ್ವಯ ಸಾಧಿಸಿದೆ. ಕನ್ನಡದ ನಾಟಕಗಳ ಬೆಳವಣಿಗೆಯಲ್ಲಿ ಇದೊಂದು ಜಲಚಿಹ್ನೆ.

ಅಂಜುಮಲ್ಲಿಗೆ ನಾಟಕ ಋಗ್ವೇದ ಸಂಹಿತೆಯ ಯಮಯಮಿಯರ ಕಥೆಗೆ ಸಮೀಪವಾಗುವ, ಅಕ್ಕ ತಮ್ಮನೊಡನೆ ಬಯಸಿದ ಲೈಂಗಿಕ ಸಂಬಂಧ ಸ್ವಾಭಾವಿಕವೆನ್ನುವಂತಹ ವಸ್ತು ಇಲ್ಲಿದೆ. ಯಾಮಿನಿ ಸತೀಶರ ಮೊದಲ ಲೈಂಗಿಕ ಸಂಬಂಧ ಪೂರ್ಣತೆಯನ್ನು ಕಾಣಲು ಹೋದ ಅಕ್ಕ ಯಾಮಿನಿ ಇಂಗ್ಲೆಂಡಿನಲ್ಲಿದ್ದ ಸತೀಶನಿಂದ ನಿರಾಶಳಾಗಿ ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದಿಷ್ಟು ಮುಖ್ಯ ಕತೆಯ ಹಂದರ. ಸಂಸ್ಕೃತಿ, ಶಿಷ್ಟಾಚಾರ, ಮತ್ತು ನೆನಪು ಬಹು ಮಹತ್ವದ ಅಂಶಗಳೆಂದು ಇಲ್ಲಿ ವಿಶ್ಲೇಷಿಸಬಹುದು. ಇದು ಆಧುನಿಕ ಜೀವನ ಶೈಲಿಯ ಮಾನವ ಸಂಬಂಧಗಳ ಮೇಲಿನ ನಾಟಕಕಾರನ ಒಳನೋಟವು ಹೌದು.

ಹಿಟ್ಟಿನಹುಂಜ ನಾಟಕವು ಜೈನ ಧರ್ಮದ ಅಹಿಂಸೆ ಪರಮೋಧರ್ಮ ಎಂಬುದನ್ನು ಪ್ರತಿನಿಧಿಸುತ್ತದೆ. ಜನ್ನನ ಯಶೋಧರ ಚರಿತ್ರೆಯಲ್ಲಿ ಬರುವ ಕಥೆಯೇ ಇಲ್ಲಿ ಮೂಲ ಪ್ರೇರಣೆಯಾಗಿದ್ದು ಮನುಷ್ಯನ ಬಾಳಿನ ಮೌಲ್ಯ ಮತ್ತು ಮೂಲಭೂತವಾದ ಇಂದ್ರಿಯ ಪ್ರವೃತ್ತಿ ನಾಟಕಕಾರನ ಜೀವನ ಕಾಳಜಿಗೆ ಕಾರಣವಾಗಿದೆ. ರಾಣಿಯೊಬ್ಬಳು ಗಾಯಕನಾದ ಮಾವುತನೊಬ್ಬನಲ್ಲಿ ಇಂದ್ರಿಯಾಕರ್ಷಳಾಗುವುದು ಹಾಗೂ ಸಹಜ ಪ್ರವೃತ್ತಿಯನ್ನು ನಿಯಂತ್ರಿಸಿಕೊಳ್ಳಲಾಗದ ಸಹಜ ಸ್ತ್ರೀಯಾಗಿ ಇಲ್ಲಿ ಚಿತ್ರಿತಳಾಗಿದ್ದಾಳೆ. ಹಿಟ್ಟಿನಹುಂಜ ನಾಟಕವು ಮನುಷ್ಯನ ಸಹಜ ಕಾಮನೆಗಳ ಸಂಕೇತವಾಗಿದೆ. ಹಳೆಯ ವಸ್ತುವಿಗೆ ಸಮಕಾಲೀನತೆಯ ಆಯಾಮವೇ ಇಲ್ಲಿಯ ಮುಖ್ಯ ಗುರಿಯಾಗಿದೆ. ರಂಗಭೂಮಿಯನ್ನು ಕಣ್ಣಾರೆ ಚಿತ್ರಿಸಿಕೊಂಡು ಬರೆದ ನಾಟಕವಿದು.

ನಾಗಮಂಡಲವು ಉಳಿದ ನಾಟಕಗಳಂತೆ ಹಿಂದಿನದನ್ನು ಪುನರುಜ್ಜೀವನಗೊಳಿಸಿ ಹೊಸ ಬೆಳಕಿನಲ್ಲಿ ಕಾಣುವ ಹಂಬಲ ಕಾರ್ನಾಡರದು. ದೇಹ, ಮನಸ್ಸು, ಬುದ್ಧಿ ಇವುಗಳೇ ಸಹಜ ತೊಳಲಾಟ, ಮಿಡಿತ, ತಿಕ್ಕಾಟ ಸದಾ ಜ್ವಲಂತವಾದ ವಸ್ತುಗಳು ಎಂಬ ಭಾವನೆಯಿಂದ ಈ ನಾಟಕವನ್ನು ರಚಿಸಿರುತ್ತಾರೆ. ಮುಗ್ಧ ರಾಣಿಯನ್ನು ಲಗ್ನವಾದ ತಿಪ್ಪಣ್ಣನೇ ಇಲ್ಲಿ ವಸ್ತು. ಹಾವು ಸಾಂಕೇತಿಕ ರೂಪದಲ್ಲಿ ಅವಳನ್ನು ಕೂಡುವುದು ಈ ಸಂಪರ್ಕದ ಅರಿವು ರಾಣಿಯಲ್ಲಿ ಅಪರಾಧ ಮತ್ತು ಪಾಪ ಪ್ರಜ್ಞೆಯನ್ನು ತರುತ್ತದೆ. ನಾಟಕ ವಾಸ್ತವ ಸಾಂಕೇತಿಕ, ನೈತಿಕ ಸ್ಥಿತಿಗಳಲ್ಲಿ ಚಿತ್ರಣವಾಗುತ್ತದೆ ಮತ್ತು ಮೌಲ್ಯಗಳ ಘರ್ಷಣೆ ಮಾನವನ ಮನಸ್ಸಿನ ಪ್ರಕ್ರಿಯೆಯ ಅನಂತತೆಯನ್ನು ಸೂಚಿಸುತ್ತದೆ.

1994 ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದ ತಲೆದಂಡ ನಾಟಕ. ಈ ನಾಟಕದ ರಚನೆಗೆ ಕಾರಣವಾದ ಸಾಮಾಜಿಕ ಹಾಗೂ ರಾಜಕೀಯ ಪ್ರೇರಣೆಯನ್ನು ಸ್ಪಷ್ಟವಾಗಿ ಸೂಚಿಸಿದರು. 12ನೇ ಶತಮಾನದಲ್ಲಿ ನಡೆದ ವೀರಶೈವ ಕ್ರಾಂತಿ

ಗಿರೀಶ್‌ರಂತೆ ಹಲವಾರು ಕನ್ನಡ ಲೇಖಕರನ್ನು ಆಕರ್ಷಿಸಿತು. ಬಸವಬಿಜ್ಜಳ ಯುಗದ ಚಿಂತಕರು ಕೇಳಿದ ಪ್ರಶ್ನೆಗಳು ನಮ್ಮ ಕಾಲಕ್ಕೂ ಪ್ರಸ್ತುತವಾಗಿವೆಯೆನ್ನುವುದನ್ನು ತೋರಿಸಿದವು. ನಂತರ ನಡೆದ ಭಯಾನಕ ಘಟನೆಗಳು ಹಾಗೂ ದೇಶದಲ್ಲಿ ಹಬ್ಬಿದ ಧಾರ್ಮಿಕ ಮತಾಂಧತೆ ಆ ಚಿಂತಕರು ಕಂಡು ಹಿಡಿದ ಪರಿಹಾರ ಮಾರ್ಗಗಳನ್ನು ನಿರ್ಲಕ್ಷಿಸುವುದು ನಾಟಕದಲ್ಲಿ ಮೂಡಿ ಬಂದಿವೆ. ತಲೆದಂಡ ನಾಟಕದಲ್ಲಿ ಎರಡು ಪ್ರಬಲ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಗಳ ಸಂಘರ್ಷವಿದೆ. ಸ್ಥೂಲವಾಗಿ ಈ ಶಕ್ತಿಗಳನ್ನು ಪ್ರತಿಗಾಮಿ ಮತ್ತು ಪುರೋಗಾಮಿ ಶಕ್ತಿಗಳೆಂದು ಗುರುತಿಸಬಹುದು.

ಆರಂಭದಲ್ಲಿ ತೆರೆಯ ಮರೆಯಲ್ಲಿ ನಡೆದಿರುವ ಈ ಸಂಘರ್ಷ ನಾಟಕದ ಕೊನೆಯಲ್ಲಿ ಬಹಿರಂಗ ಸ್ವರೂಪವನ್ನು ತಳೆದು ಪ್ರತಿಗಾಮಿ ಶಕ್ತಿಗಳ ವಿಜಯದಲ್ಲಿ ಕೊನೆಗೊಳ್ಳುತ್ತದೆ. ಬಸವಣ್ಣ, ಬಿಜ್ಜಳ, ಜಗದೇವ ಇವರೆಲ್ಲರೂ ತಮ್ಮದೇ ಆದ ವಿಧಿವಿಧಾನಗಳಲ್ಲಿ ಕ್ರಾಂತಿಯನ್ನು ಪುರಸ್ಕರಿಸುತ್ತಾರಾದರೂ ಅವರ ಸ್ವಭಾವ ಹಾಗೂ ಆಚರಣೆಗಳಲ್ಲಿ ಹೊಂದಾಣಿಕೆ ಕಾಣಲಾರದ ವಿರೋಧಗಳಿವೆ. ಈ ವಿರೋಧಗಳ ಮೂಲಗಳನ್ನು ಶೋಧಿಸುವ ಮಹತ್ವಾಕಾಂಕ್ಷೆಯೂ ಗಿರೀಶರ ನಾಟಕಕ್ಕಿದೆ.

ತುಘಲಕದಲ್ಲಿ ರಾಜಕೀಯ ಅಪರೋಕ್ಷವಾಗಿದ್ದರೆ, ತಲೆದಂಡದಲ್ಲಿ ಅದು ನೇರವಾಗಿಯೇ ಬಂದಿದೆ. ಎರಡು ನಾಟಕಗಳು ಇತಿಹಾಸದಿಂದಲೇ ತಮ್ಮ ವಸ್ತುವನ್ನು ಆಯ್ದುಕೊಂಡು ಧರ್ಮ, ರಾಜಕೀಯ, ತಾಕಲಾಟ ಎರಡರಲ್ಲಿಯೂ ಇದೆ. ತುಘಲಕದಲ್ಲಿ ಕಾರ್ನಾಡರು ಸ್ವಾತಂತ್ರ್ಯದ ನಂತರದ ನೆಹರು ಯುಗದ ರಾಜಕೀಯ ಪ್ರಶ್ನೆಗಳನ್ನು ತೆಗೆದುಕೊಂಡು ಅದಕ್ಕೊಂದು ಅರ್ಥಪೂರ್ಣವಾದ ರೂಪಕವನ್ನು ಸೃಷ್ಟಿಸಿದರೆ ತಲೆದಂಡದಲ್ಲಿ ಭಾರತದ ರಾಜಕೀಯವನ್ನು ದಿಕ್ಕೆಡಿಸುವ ಧಾರ್ಮಿಕ ಮತಾಂಧತೆಯ ಪರಿಣಾಮಗಳ ಬಗ್ಗೆ ಎಚ್ಚರಿಕೆಯನ್ನು ಸೂಚಿಸಿದರು.

ಗಿರೀಶ್ ಕಾರ್ನಾಡರ ಮತ್ತೊಂದು ಮಹತ್ವಾಕಾಂಕ್ಷೆಯ ನಾಟಕ ಅಗ್ನಿ ಮತ್ತು ಮಳೆ. ಮಹಾಭಾರತದ ವನಪರ್ವದಲ್ಲಿ ಬರುವ ಲೋಮಶರು ಯುಧಿಷ್ಠಿರನಿಗೆ ಹೇಳಿದ ಯವಕ್ರೀತನ ಕಥೆ ನಾಟಕಕ್ಕೆ ಮುಖ್ಯ ವಸ್ತುವನ್ನು ಒದಗಿಸಿದೆ. ಅಗ್ನಿ ಮತ್ತು ಮಳೆ ಶೀರ್ಷಿಕೆಯೇ ಮಾನವನ ಅಸ್ತಿತ್ವದ ಸಂದರ್ಭಗಳ ದ್ವಂದ್ವಸೂಚಕ ಸಂಕೇತವಾಗಿ ಗಮನಸೆಳೆಯುತ್ತದೆ. ನಾಟಕದ ವಸ್ತುವಿನ ಆಯ್ಕೆಯಲ್ಲಿ ತೋರುವ ಅವರ ಪ್ರತಿಭೆ ಉನ್ನತ. ಅವರ ಜೀವನ ಸಂವೇದನೆ ಮತ್ತು ತಾತ್ವಿಕ ದೃಢತೆಗಳನ್ನು ಬಿಂಬಿಸುತ್ತದೆ. ಆರಿಸಿಕೊಂಡ ವಸ್ತುವಿನ ವಿಶ್ಲೇಷಣೆಯಲ್ಲಿ ಪೂರ್ಣ ಮುಳುಗಿ ಒಳನೋಟ ಒದಗಿಸುತ್ತಾರೆ. ತಾವು ಬೆಳೆಸಿಕೊಂಡು ಬಂದ ಮತ್ತು ವಿಶ್ವಾಸವಿಟ್ಟ ತಾತ್ವಿಕ ಚೌಕಟ್ಟಿಗೆ ನಾಟಕದ ಸಮರ್ಪಕ ರೂಪಕೊಟ್ಟು ರಂಗಭೂಮಿ ಪ್ರಯೋಗದ ದೃಷ್ಟಿಯಿಂದಲೂ ಯಶಸ್ಸು ದೊರಕಿಸಿಕೊಂಡರು.

**ಸಮಾರೋಪ:**

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ ಗಿರೀಶ್ ಕಾರ್ನಾಡರಿಗೆ 1998 ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಾಗ ಕನ್ನಡದಂತೆ ಉಳಿದ ಎಲ್ಲ ಭಾಷೆ ರಂಗಭೂಮಿಯ ಪ್ರೇಮಿಗಳಿಗೆ ಅತ್ಯಂತ ಹೆಮ್ಮೆಯ ಅನುಭವವಾಯಿತು. ಭಾರತದ ಹಲವಾರು ಭಾಷೆಗಳ ರಂಗಭೂಮಿಯ ಮೇಲೆ ಯಶಸ್ವಿ ಪ್ರಯೋಗ ಕಂಡ ಅವರ ನಾಟಕಗಳು ಪ್ರೇಕ್ಷಕರನ್ನು ಮರುಳುಗೊಳಿಸಿತ್ತು ಎಂದು ಬೇರೆ ಹೇಳಬೇಕಿಲ್ಲ.

ತಮ್ಮ ನಾಟಕಗಳಿಗೆ ಇತಿಹಾಸ ಮತ್ತು ಪುರಾಣಗಳಿಂದ ವಸ್ತು, ವಿಷಯ ಆಯ್ಕೆ ಮಾಡಿಕೊಂಡರೂ ಸಮಕಾಲೀನ ಪ್ರಜ್ಞೆಯನ್ನು ಅವುಗಳನ್ನು ಒರೆಗೆ ಹಚ್ಚಿದ್ದಾರೆ. ಇವರು ಎರಡು ಪ್ರಕಾರದ ನಾಟಕಗಳನ್ನು ಬರೆದರು, ಒಂದು ಐತಿಹಾಸಿಕ ಘಟನೆಗಳನ್ನಾಧರಿಸಿದ ಅಂದರೆ ಸಮಕಾಲೀನ ಪ್ರಸ್ತುತತೆಯನ್ನುಳ್ಳ ರಾಜಕೀಯ ನಾಟಕ ತುಘಲಕ್, ತಲೆದಂಡ ಈ ಜಾತಿಯವು. ಇನ್ನೊಂದು ಪುರಾಣ, ಜಾನಪದ ಕಥೆಗಳಿಂದಾದ ವಸ್ತುಗಳನ್ನಾಧರಿಸಿ ಮಾನವನ ಮೂಲಭೂತ ಅಸ್ತಿತ್ವಕ್ಕೆ ಸಂಬಂಧಿಸಿದ, ಸಮಸ್ಯೆಗಳನ್ನೆತ್ತಿಕೊಳ್ಳುವ ನಾಟಕ ಅಗ್ನಿ ಮತ್ತು ಮಳೆ. ಈ ನಾಟಕ ಎರಡನೆಯ ಪ್ರಕಾರದ ನಾಟಕ ಎಂದೆನಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಅಮೂರ ಜಿ.ಎಸ್., (2008), ಸಾತ್ವಿಕ ಪಥ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
2. ಮರುಳಯ್ಯ ಸಾ.ಶಿ. (2010), ಭಾರತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಸಪ್ನ ಬುಕ್ ಹೌಸ್, ಬೆಂಗಳೂರು.
3. ಶೇಷಗಿರಿರಾವ್ ಎಲ್.ಎಸ್., (2013), ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.